**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ತರೀಕೆರೆ**

**ಅಸಲು ದಾವಾ ಸಂ. 517/2025 P.W.-1**

ದಿನಾಂಕಃ 13-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

ಮುಖ್ಯ ವಿಚಾರಣೆ ಃ ವಾದಿ ಪರ ಶ್ರೀ ಟಿ ಆರ್ ಎ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣಪತ್ರದ ಮೂಲಕ ಸಲ್ಲಿಸುತ್ತಿದ್ದೇನೆ. ಅದನ್ನು ಓದಿ, ತಿಳಿದು, ಸಹಿ ಮಾಡಿರುತ್ತೇನೆ. ಅದರಲ್ಲಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ.

ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎ ಜಿ ಪಿ ರವರಿಂದ -

ಈ ದಾವೆಯ ವಾದಿ ನನ್ನ ಮಗಳ ಮಗ. ನನ್ನ ಮಗಳನ್ನು ಷಡಾಕ್ಷರಿ ಸಿ. ರವರಿಗೆ ಕೊಟ್ಟು ಮದುವೆ ಮಾಡಿರುತ್ತೇನೆಂದರೆ ಸರಿ. ನನ್ನ ಮೊಮ್ಮಗ 9 ತಿಂಗಳ ಮಗು ಇರುವಾಗ ನನ್ನ ಮಗಳು ತೀರಿಹೋಗಿರುತ್ತಾಳೆ ಎಂದರೆ ಸರಿ. ವಾದಿ ನನ್ನ ಮೊಮ್ಮಗ ನಮ್ಮ ಜೊತೆ ಬೆಳೆದಿರುತ್ತಾನೆ ಎಂದರೆ ಸರಿ. ವಾದಿಯನ್ನು ಶಾಲೆಗೆ ನನ್ನ ಗಂಡ ಸೇರಿಸಿರುತ್ತಾರೆಂದರೆ ಸಾಕ್ಷಿ ನಾನು ಸೇರಿಸಿರುತ್ತೇನೆಂದು ನುಡಿದಿರುತ್ತಾರೆ. ಶಾಲೆಯಲ್ಲಿ ವಾದಿಯ ವಿವರವನ್ನು ನೀವೇ ನೀಡಿರುತ್ತೀರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿದ್ದು, ಮುಂದುವರಿದು ನಾನು ಸರಿಯಾಗಿ ನೀಡಿರುತ್ತೇನೆ, ಆದರೆ ನನ್ನ ಮೊಮ್ಮಗನ ಹೆಸರು ವಿಜಯ್ ಕುಮಾರ್ ಎಂದು ತಪ್ಪಾಗಿ ನಮೂದು ಆಗಿರುತ್ತದೆ ಎಂದು ನುಡಿದಿರುತ್ತಾರೆ. ನೀವು ವಾದಿಯನ್ನು ಶಾಲೆಗೆ ಸೇರಿಸುವ ಸಮಯದಲ್ಲಿ ಅವರ ತಂದೆಯ ಹೆಸರು ವಿಜಯ್ ಕುಮಾರ್ ಎಂದು ನೀಡಿರುತ್ತೀರಾ, ಪ್ರತಿವಾದಿಯ ತಪ್ಪಿನಿಂದ ವಾದಿಯ ತಂದೆಯ ಹೆಸರು ತಪ್ಪಾಗಿ ನಮೂದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಷಡಾಕ್ಷರಿಯವರನ್ನು ವಿಜಯ್

ಕುಮಾರ್ ಎಂದು ಅವರ ಮನೆಯಲ್ಲಿ ಕರೆಯುತ್ತಿದ್ದರು ಎಂದು ನುಡಿದಿರುತ್ತಾರೆ.

ಷಡಾಕ್ಷರಿಯವರ ತಂದೆ ಹೆಸರು ಚೆನ್ನಬಸಪ್ಪ, ತಾಯಿ ಹೆಸರು ಪಾರ್ವತಮ್ಮ ಆಗಿರುತ್ತದೆ.

ಮರು ವಿಚಾರಣೆಃ ಇರುವುದಿಲ್ಲ

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.

sd/-
1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ.ದಂ.ರವರು, ತರೀಕೆರೆ.